ಜೀನ್ಸ್ ಪ್ಯಾಂಟ್, ಕಾರ್ಗೊ ಪ್ಯಾಂಟ್, ತ್ರೀ ಫೋರ್ತ್ ಹೀಗೆ ಡೆನಿಮ್ ಪ್ಯಾಂಟ್‌ಗಳಲ್ಲಿ ನೂರಾರು ನಮೂನೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ.

### ಜಂಪ್ ಸೂಟ್

ಇತ್ತೀಚಿನ ದಿನಗಳಲ್ಲಿ ಹೆಚ್ಚು ಟ್ರೆಂಡ್ ಸೃಷ್ಟಿಸಿರುವ ಜಂಪ್ ಸೂಟ್‌ಗಳು ಹೆಸರುವಾಸಿ. ಯಾವುದೇ ಕಾಲಕ್ಕೂ ಸೂಕ್ತವೆನಿಸುವ ಉಡುಗೆ ಇದು.

### ಡೆನಿಮ್ ಸ್ಕರ್ಟ್

ದಪ್ಪನೆಯ ಡೆನಿಮ್ ಬಟ್ಟೆಯ ಸ್ಕರ್ಟ್, ಶರ್ಟ್, ಟಾಪ್, ಬ್ಲೌಸ್ ಎಲ್ಲದಕ್ಕೂ ಸೂಕ್ತ. ಉದ್ದ ಸ್ಕರ್ಟ್, ಗಿಡ್ಡ ಸ್ಕರ್ಟ್, ಮ್ಯಾಕ್ಸಿಗಳು ಟ್ರೆಂಡಿ ಲುಕ್ ಕೊಡುತ್ತವೆ.

### ಶರ್ಟ್ ಮತ್ತು ಜಾಕೆಟ್

ಮಳೆಗಾಲ, ಚಳಿಗಾಲದಲ್ಲಿ ಮೈ ಬೆಚ್ಚಗಿಡಲು ಧರಿಸುವ ಡೆನಿಮ್ ಕೋಟ್‌ಗಳು ಬೇಸಿಗೆಯಲ್ಲಿ ಫ್ಯಾಷನ್ ಮೆರೆಯಲು ಸಹಾಯಕ. ಟೀ ಶರ್ಟ್, ಸ್ಕರ್ಟ್‌ಗಳ ಮೇಲೆ ಸ್ಟೈಲಿಷ್ ಲುಕ್ ಕೊಡುವ ಡೆನಿಮ್ ಜಾಕೆಟ್ ಚಂದ ಕಾಣುತ್ತದೆ. ಇನ್ನು ಯುನಿಸೆಕ್ಸ್ ಡೆನಿಮ್ ಶರ್ಟ್‌ಗಳು ಹುಡುಗ–ಹುಡುಗಿ ಇಬ್ಬರಿಗೂ ಚೆನ್ನಾಗಿರುತ್ತದೆ.

### ಡೆನಿಮ್ ಬ್ಯಾಗ್

ದಪ್ಪನೆಯ ಡೆನಿಮ್ ಬಟ್ಟೆಯ ಬ್ಯಾಗ್‌ಗಳೀಗ 'ರಫ್ ಆ್ಯಂಡ್ ಟಫ್' ಎಂಬ ಸೂತ್ರದ ಅಡಿಯಲ್ಲಿ ಫ್ಯಾಷನ್‌ನ ಒಂದು ಭಾಗವಾಗಿವೆ. ಹ್ಯಾಂಡ್ ಬ್ಯಾಗ್, ಕಾಲೇಜ್ ಬ್ಯಾಗ್, ಸೈಡ್ ಬ್ಯಾಗ್, ಪರ್ಸ್, ಕ್ಲಚ್... ಹೀಗೆ ಡ್ರೆಸ್‌ಗೆ ಮ್ಯಾಚ್ ಮಾಡಿಕೊಳ್ಳಬಹುದಾಗಿದೆ. ಹೊಲಿಗೆ ಬಗ್ಗೆ ಜ್ಞಾನ ಇದ್ದರೆ ನಾವೇ ಹಳೆಯ ಡೆನಿಮ್ ಬಟ್ಟೆಗಳಿಂದ ಬ್ಯಾಗ್ ಹೊಲಿಯಬಹುದು.

### ಡೆನಿಮ್ ಶೂ

ಕೇವಲ ಉಡುಪುಗಳಿಗೆ ಸೀಮಿತವಾಗಿರದೆ ಡೆನಿಮ್ ಬಟ್ಟೆಗಳು ಶೂಗಳಿಗೂ ಸೂಕ್ತ ಎನಿಸಿವೆ. ಕೇವಲ ನೀಲಿ ಶೇಡ್‌ನಲ್ಲಿ ಮಾತ್ರವಲ್ಲದೆ ಕಪ್ಪು, ಬಿಳಿ, ಕಂದು, ಬೂದು ಬಣ್ಣಗಳಲ್ಲಿ ಲಭ್ಯ.

ವಾಕಿಂಗ್ ಜಾಗಿಂಗ್‌ಗಳಿಗೆ ಮಾತ್ರವಲ್ಲದೆ ಕಾಲೇಜು ಮತ್ತು ಆಫೀಸ್‌ಗೆ ಸಹ ಡೆನಿಮ್ ಶೂ ಫ್ಯಾಷನಬಲ್ ಎನಿಸುತ್ತದೆ. ನಿರ್ವಹಣೆ ಸುಲಭವಾಗಿ ಇರುವ ಡೆನಿಮ್ ಉಡುಪು ಬಜೆಟ್‌ಗೆ ತಕ್ಕಂತೆ ಸಿಗುತ್ತವೆ. ಯಾವುದೇ ಮೈಬಣ್ಣ ಇದ್ದರೂ ಡೆನಿಮ್ ಡ್ರೆಸ್ ಚಂದ ಕಾಣುತ್ತದೆ.

ಡೆನಿಮ್ ಜೀನ್ಸ್, ಶರ್ಟ್, ಕುರ್ತಾ, ಜಾಕೆಟ್ ಯಾವುದೇ ಇರಲಿ ಚಳಿಗಾಲವೂ ಸೇರಿದಂತೆ ಎಲ್ಲ ಕಾಲಗಳಿಗೂ ಸೂಕ್ತ ಹಾಗೂ ಫ್ಯಾಷನಬಲ್ ಆಗಿ ಕಾಣುವ ಉಡುಗೆ ಇದು. ■





# ಪರಿಸರಸ್ನೇಹಿ ಡೆನಿಮ್

ಡೆನಿಮ್ ಪರಿಸರಸ್ನೇಹಿ ಉಡುಗೆ. ಡೆನಿಮ್ ಬಟ್ಟೆ ತಯಾರಿಸಲು ವಿವಿಧ ಗಿಡಗಳ ಉತ್ಪನ್ನಗಳನ್ನು ಬಳಸಲಾಗುತ್ತದೆ. ನ್ಯಾಚುರಲ್ ಇಂಡಿಗೊ, ಮಾಡ್ಡರ್, ರೀಮ್, ಇಮೋದಿ ಹಾಗೂ ಹರ್ದಾ ಎಂಬ ಮರಗಳ ಸತ್ವವನ್ನು ಉಪಯೋಗಿಸಿ ಬಟ್ಟೆ ತಯಾರಿಸಲಾಗುತ್ತದೆ. ಜತೆಗೆ ನೈಸರ್ಗಿಕ ಡೈಯಿಂಗ್ ಅನ್ನೂ ಬಳಸಿ ಡೆನಿಮ್ ಬಟ್ಟೆಗೆ ಅಂತಿಮ ರೂಪ ನೀಡಲಾಗುತ್ತದೆ.

ಡೆನಿಮ್ ಉಡುಪು ಎಂದರೆ ಅದರ ನಿರ್ವಹಣೆ ಕಷ್ಟ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಇದೀಗ ಫ್ಯಾಷನ್ ಟ್ರೆಂಡ್ ಆಗಿರುವ ಡೆನಿಮ್ ಸುಕ್ಕು ರಹಿತವಾಗಿದ್ದು ಎಲ್ಲ ಕಾಲಕ್ಕೂ ಸೂಕ್ತ ಎನಿಸಿದೆ. ಕಾಟನ್ ಅನ್ನು ಬಹುಪಾಲು ಕಚ್ಚಾ ಉತ್ಪನ್ನವಾಗಿ ಹೊಂದಿರುವ ಡೆನಿಮ್ ಉಡುಪು ಹಿತವಾದ ಅನುಭವವನ್ನೇ ನೀಡುತ್ತದೆ. ಹೀಗಾಗಿ ಡೆನಿಮ್ ಉಡುಗೆಗಳಿಗೆ ಈಗ ಬೇಡಿಕೆಯೂ ಹೆಚ್ಚುತ್ತಿದೆ.

'ಡೆನಿಮ್ ಬಟ್ಟೆಯ ಕೆಲ ವೈವಿಧ್ಯ 'ಅಗ್ನಿ ನಿರೋಧಕ' (fire protective) ಗುಣವನ್ನೂ ಹೊಂದಿದೆ. ಈ ಗುಣದಿಂದಾಗಿ ಡೆನಿಮ್ ಅನ್ನು ಯಾವ ಕಾಲದಲ್ಲೂ ಬಳಸಬಹುದು. ಅಲ್ಲದೆ ಈ ಬಟ್ಟೆ ಬಳಸಿ ಬೇಜಾರಾದರೆ ಹಾಗೇ ಇಟ್ಟು ಹತ್ತು–ಹದಿನೈದು ವರ್ಷಗಳ ನಂತರ ಮರುಬಳಕೆ ಮಾಡಿಯೂ ಬಳಸಬಹುದು' ಎನ್ನುತ್ತಾರೆ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಫ್ಯಾಷನ್ ತಜ್ಞೆ ಸುಲೋಚನಾ ಜೋಶಿ.

ಡೆನಿಮ್ ಬಟ್ಟೆಯಲ್ಲಿ ಕಲರ್ ಡೆನಿಮ್ ಕೂಡ ಬಂದಿದ್ದು, 'ಮಿಕ್ಸ್ ಅಂಡ್ ಮ್ಯಾಚ್' ಮಾಡಿಕೊಳ್ಳಲು ಸಹಾಯಕ. ಫ್ಯಾಷನ್‌ಪ್ರಿಯರನ್ನು, ಕಾಲೇಜು ಹುಡುಗಿಯರನ್ನು ಕಲರ್ ಡೆನಿಮ್ ಬಹುವಾಗಿ ಸೆಳೆಯುತ್ತಿದೆ. ಇಂತಹ ಉಡುಪಿನೊಂದಿಗೆ ಹೈಹೀಲ್ಸ್ ಅಥವಾ ಸ್ಯಾಂಡಲ್ಸ್ ಹಾಕಿಕೊಂಡೂ ಸ್ಟೈಲಿಷ್ ಲುಕ್ ಪಡೆಯಬಹುದು.

### ಬೆಚ್ಚನೆಯ ಭಾವಕ್ಕೆ...

ಚಳಿಯಾಗುವಾಗ ಬೆಚ್ಚನೆಯ ಉಡುಗೆಯೇ ಬೇಕು ಎಂದು ಬಯಸುತ್ತದೆ ದೇಹ, ಸ್ಟೈಲಿಷ್ ಆಗಿಯೂ ಇರಬೇಕು ಎನ್ನುತ್ತದೆ ಮನಸ್ಸು. ಚಳಿಗಾಲದಲ್ಲಿ ಫ್ಯಾಷನ್ ಮೆರೆಯುವವರು ಡೆನಿಮ್‌ನಲ್ಲೇ ಕಾಂಬಿನೇಷನ್ ಉಡುಗೆ ಬಳಸಲು ಇಷ್ಟಪಡುತ್ತಾರೆ. ತಿಳಿ ಬಣ್ಣದ ಜೀನ್ಸ್ ಉಡುಪಿನ ಮೇಲೆ ಗಾಢ ಬಣ್ಣದ ಜಾಕೆಟ್ ಆಕರ್ಷಕವೆನಿಸುತ್ತದೆ. ಇದೇ ಬಣ್ಣಗಳನ್ನು ಅದಲು ಬದಲಾಗಿಯೂ ಬಳಸಬಹುದು. ಬಿಳಿ ಬಣ್ಣದ ದಿರಿಸು ಇಷ್ಟಪಡುವವರು ಅದರ ಮೇಲೆ ಗಾಢ ನೀಲ ವರ್ಣದ ಡೆನಿಮ್ ಜಾಕೆಟ್ ಹಾಕಬೇಕು. ಹೂವುಗಳಿಂದ ಕೂಡಿದ ಕುರ್ತಾ ಮೇಲೂ ಇದು ಸಖತ್ ಆಗಿ ಕಾಣುತ್ತದೆ.

■ ಯು.ಎ.